ಇ) 93, ಸರ್ವೋಚ್ಚ ನ್ಯಾಯಾಲಯದ ಅನುಸಾರ ಶೇಕದ 25 ಸೀಟುಗಳನ್ನು ಆಡಳಿತ ಮಂಡಳಿಗೆ ನೀಡಲಾಗಿದೆ.

ರಾಜ್ಯ ಕೊಳಚೆ ಪ್ರದೇಶ ನಿವಾಸಿಗಳಿಗೆ ನಿವೇಶನದ ಹಕ್ಕನ್ನು ನೀಡುವುದರ ಬಗ್ಗೆ

2872 (2818) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಘೋಷಿತ ಕೊಳಚೆ ಪ್ರದೇಶದ ನಿವಾಸಿಗಳಿಗೆ ನಿವೇಶನ ಒಡೆತನ ನೀಡುವ ಪ್ರಸ್ತಾವನೆ ಸರಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ ಉದ್ದೇಶಿತ ಪ್ರಸ್ತಾವನೆಯ ವಿವರಗಳೇನು;

ಇ) ನಿವೇಶನದ ಒಡೆತನ ನೀಡುವ ಪ್ರಕ್ರಿಯೆಯಾವಾಗಿನಿಂದ ಆರಂಭವಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

ಅ) ಹೌದು.

ಆ) ಘೋಷಿತ ಕೊಳಚೆ ಪ್ರದೇಶಗಳಲ್ಲಿ 10 ವರ್ಷಗಳಿಗೂ ಮೇಲ್ಪಟ್ಟು ವಾಸ ಮಾಡುವ ಕೊಳಚೆ ನಿವಾಸಿಗಳ ಜಾಗಕ್ಕೆ ಮಂಡಳಿಯು ನಿರ್ಧರಿಸಿದ ದರದಲ್ಲಿ ನಿವೇಶನದ ಬೆಲೆಯನ್ನು ಮಂಡಳಿಗೆ ಪೂರ್ತಿ ಪಾವತಿಸಿದ ನಂತರ ಸದರಿ ನಿವೇಶನದ ಒಡೆತನದ ಹಕ್ಕನ್ನು ಕೊಳಚೆ ನಿವಾಸಿಯ ಗಂಡ ಮತ್ತು ಹೆಂಡತಿ ಇಬ್ಬರ ಹೆಸರಿಗೆ ನೀಡಲು ಉದ್ದೇಶಿಸಿ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ಕ್ಕೆ ತಿದ್ದುಪಡಿ ಮಾಡಲಾಗಿದೆ. ಇದಕ್ಕೆ ಪೂರಕವಾಗಿ ನಿಯಮ ಮತ್ತು ಷರತ್ತುಗಳನ್ನು ಸರ್ಕಾರದಲ್ಲಿ ರೂಪಿಸಲಾಗುತ್ತಿದೆ.

ಇ) ನಿಯಮಗಳು ಜಾರಿಗೆ ಬಂದ ನಂತರ ನಿವೇಶನದ ಒಡೆತನವನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

ಮಂಡ್ಯದ ಸರಕಾರಿ ಮಹಿಳಾ ಕಾಲೇಜಿಗೆ ಕೊಠಡಿಗಳ ಸೌಲಭ್ಯ ಒದಗಿಸಿರುವ ಬಗ್ಗೆ

2873 (2819) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯದಲ್ಲಿನ ಸರ್ಕಾರಿ ಕಾಲೇಜಿಗೆ ಸ್ಥಳಾವಕಾಶದ ಕೊರತೆ ಇದ್ದು, ಕೊಠಡಿಗಳ ನಿರ್ಮಾಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಲೇಜಿನಲ್ಲಿರುವ ಸ್ಥಳಾವಕಾಶ ಕೊರತೆಯನ್ನು ನಿವಾರಿಸಲು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುವುದೆ; (ಅದರ ವಿವರ ಒದಗಿಸುವುದು)?

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) ಹೌದು.

ಆ) ಸ್ಥಳಾವಕಾಶ ಕೊರತೆಯನ್ನು ನಿವಾರಿಸುವ ಸಂಬಂಧ ದಿನಾಂಕ 22-2-03ರ ಪತ್ರದಲ್ಲಿ ಕೊಠಡಿಗಳ ಅವಶ್ಯಕತೆಯ ವಿವರಗಳೊಂದಿಗೆ ಲೋಕೋಪಯೋಗಿ ಇಲಾಖೆಯವರನ್ನು ಸಂಪರ್ಕಿಸಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಕಳುಹಿಸಲು ಪ್ರಾಂಶುಪಾಲರಿಗೆ ಸೂಚಿಸಲಾಗಿದ್ದು, ವರದಿ ಬಂದ ನಂತರ ಲಭ್ಯವಿರುವ ಅನುದಾನದಲ್ಲಿ ಕಟ್ಟಡ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗುವುದು.